ನೇರವಾಗಿ ಉತ್ತರಿಸದೆ ತಾವು ಮುಂದೆ ಕೈಗೊಳ್ಳಬೇಕೆಂದಿರುವ ಅಮೆರಿಕ ಪ್ರವಾಸದ ಬಗ್ಗೆ ತಿಳಿಸಿದರು. ಭಾರತದ ಬಗ್ಗೆ, ಭಾರತದ ಸಂಸ್ಕೃತಿಯ ಬಗ್ಗೆ, ಭಾರತದ ವೇದಾಂತ ಮತ್ತು ಅಧ್ಯಾತ್ಮ ಶಕ್ತಿಯ ಬಗ್ಗೆ, ಭಾರತೀಯರ ಬಗ್ಗೆ ಮತ್ತು ಭಾರತಕ್ಕೆ ಅವಶ್ಯವಿರುವ ಪಾಶ್ಚಾತ್ಯ ವೈಜ್ಞಾನಿಕ ಜ್ಞಾನದ ಬಗ್ಗೆ, ಕೈಗಾರಿಕಾ ಪ್ರಗತಿಯ ಬಗ್ಗೆ, ವಿದ್ವತ್ಪೂರ್ಣವಾಗಿ ಮಾತನಾಡಿದರು. ಅವರು ಮುಂದುವರಿದು ಪಾಶ್ಚಾತ್ಯರಿಂದ ಭಾರತೀಯರು ವ್ಯವಸಾಯ, ಕೈಗಾರಿಕೆ ಮತ್ತು ಇತರ ಜ್ಞಾನದ ಬಗ್ಗೆ ಅವಶ್ಯವಾದ ವಿವರಗಳನ್ನು ದೊರಕಿಸಿಕೊಳ್ಳಬೇಕೆಂಬ, ಇದರಿಂದ ಭಾರತೀಯರು ಉತ್ತಮವಾದ ಜೀವನ ನಡೆಸುವಂತಾಗಬೇಕೆಂಬ ತಮ್ಮ ಅಭಿಪ್ರಾಯ ತಿಳಿಸಿದರು.

ಮಹಾರಾಜರು ಸ್ವಾಮೀಜಿಯವರ ಅಮೆರಿಕ ಪ್ರವಾಸಕ್ಕೆ ಬೇಕಾದ ಹಣಸಹಾಯ ನೀಡುವುದಾಗಿ ಭರವಸೆ ನೀಡಿದರು. ಆದರೆ ಸ್ವಾಮೀಜಿ ಆ ಕೂಡಲೇ ಹಣವನ್ನು ಸ್ವೀಕರಿಸಲು ಒಪ್ಪಲಿಲ್ಲ.

ಕೆಲವು ದಿನ ಕಳೆದಮೇಲೆ ಸ್ವಾಮೀಜಿ ತಾವು ಮುಂದಿನ ಪ್ರವಾಸ ಕೈಗೊಳ್ಳುವುದಾಗಿ ತಿಳಿಸಿದರು. ಮಹಾರಾಜರು ಅದಕ್ಕೆ ಸಮ್ಮತಿಸದೆ ಇನ್ನೂ ಕೆಲವು ಕಾಲ ತಮ್ಮ ಜೊತೆಯಲ್ಲೇ ಇರಬೇಕೆಂದು ಅಪೇಕ್ಷಿಸಿದರು. ಸ್ವಾಮೀಜಿ ಇದಕ್ಕೆ ಒಪ್ಪದೆ ಪ್ರಯಾಣಕ್ಕೆ ಸನ್ನದ್ಧರಾದರು. ಮಹಾರಾಜರು ಸ್ವಾಮೀಜಿಗೆ ಬೆಲೆಬಾಳುವ ವಸ್ತುವನ್ನು ಬಹುಮಾನವಾಗಿ ಕೊಡಲು ಬಯಸಿದರು. ಸ್ವಾಮೀಜಿ ಒಂದು ಹುಕ್ಕಾವನ್ನು ಮಾತ್ರ ಸ್ವೀಕರಿಸಿದರು. ಅದರ ಜೊತೆಗೆ ಕರಿಮರದಲ್ಲಿ ಸುಂದರವಾಗಿ ಕೆತ್ತನೆ ಮಾಡಿದ್ದ ನಳಿಗೆಯನ್ನೂ ತೆಗೆದುಕೊಂಡರು. ಮಹಾರಾಜರು ಸ್ವಾಮೀಜಿಯವರ ನೆನಪಿಗಾಗಿ



ಸ್ವಾಮೀಜಿ ಮೈಸೂರಿಗೆ ಬಂದಿದ್ದಾಗ ಉಳಿದುಕೊಂಡಿದ್ದ ಹಳೆಯ ಅರಮನೆ

ಸ್ವಾಮೀಜಿಯ ಸಂದೇಶವನ್ನು ಧ್ವನಿಮುದ್ರಣ ಮಾಡಿಕೊಂಡರು ಎಂದು ಕರ್ಣಾಕರ್ಣಿಯಾಗಿ ತಿಳಿದುಬಂದಿದೆ. ಆದರೆ ದುರದೃಷ್ಟವಶಾತ್ ಆ ಧ್ವನಿಮುದ್ರಿಕೆ ಸಿಕ್ಕಿಲ್ಲ. ಸ್ವಾಮೀಜಿ ಹೊರಡುವ ದಿನ ಬಂದಿತು. ಅವರು ಹೊರಟು ನಿಂತಾಗ ಮಹಾರಾಜರು ಅವರಿಗೆ ಪಾದಮುಟ್ಟಿ ನಮಸ್ಕರಿಸಿದರು. ದಿವಾನರು ಸ್ವಾಮೀಜಿಯವರ ಜೇಬಿಗೆ ಹಣದ ಕಂತೆ ತುರುಕಲು ಪ್ರಯತ್ನಿಸಿದರು. ಸ್ವಾಮೀಜಿ ಅದಕ್ಕೆ ಸಮ್ಮತಿಸಲಿಲ್ಲ. ಆದರೆ ತಾವು ಹೋಗಬೇಕೆಂದಿದ್ದ ಸ್ಥಳಕ್ಕೆ ಟಿಕೆಟ್ ತರಿಸಿಕೊಡುವಂತೆ ತಿಳಿಸಿದರು. ಸ್ವಾಮೀಜಿ ತಮ್ಮ ಪ್ರವಾಸ ಮುಂದುವರಿಸಿದರು. ಶ್ರೀ ಕೆ.ಶೇಷಾದ್ರಿ ಅಯ್ಯರ್‌ರವರು ಕೊಟ್ಟ ಸಂಸ್ಥಾನದ ದಿವಾನರಿಗೆ ಪರಿಚಯ ಪತ್ರವನ್ನು ಇತ್ತರು. ಇದರೊಂದಿಗೆ ಸ್ವಾಮೀಜಿಯವರ ಕರ್ನಾಟಕದ ಪ್ರವಾಸ ಕೊನೆಗೊಂಡಿತು. ❖

## ಪ್ರಹಸನ ಪ್ರಸಂಗ

ನಾವು ಇತರರನ್ನು ಅಪಹಾಸ್ಯ ಮಾಡಲು ಹೋದರೆ ನಾವೇ ಎಷ್ಟೋ ವೇಳೆ ಅಪಹಾಸ್ಯಕ್ಕೆ ಒಳಗಾಗುತ್ತೇವೆ. ನಾವು ಅಪಹಾಸ್ಯಕ್ಕೆ ಒಳಗಾದಾಗ ನಮ್ಮ ಅಹಂಕಾರಕ್ಕೆ ಹೇಗೆ ನೋವುಂಟಾಗುವುದೋ ಹಾಗೆಯೆ ಇತರರಿಗೂ ಕೂಡ ಎಂಬ ತಿಳಿವು ನಮಗಿರಬೇಕು.

ಪಶುವೈದ್ಯನೊಬ್ಬನು ತನ್ನ ವೃತ್ತಿಯನ್ನು ತ್ಯಜಿಸಿ ರಾಜಕೀಯವನ್ನು ಪ್ರವೇಶಿಸಿದ. ಹೇಗೋ ಪಾರ್ಲಿಮೆಂಟಿಗೆ ಚುನಾಯಿತನಾಗಿ ಹೋದನು.

ಒಮ್ಮೆ ಪಾರ್ಲಿಮೆಂಟ್ ಸಭೆ ಸೇರಿರುವಾಗ ಇವನಿಗೂ ಇನ್ನೋರ್ವ ಸದಸ್ಯನಿಗೂ ವಾಗ್ಯುದ್ಧ ಶುರುವಾಯಿತು. ಆ ಸಂದರ್ಭದಲ್ಲಿ ಈ ಪಶುವೈದ್ಯನನ್ನು ಅವನು ತುಂಬ ತಿರಸ್ಕಾರದ ಧ್ವನಿಯಲ್ಲಿ,

'ನೀವು "ಪಶು"ವೈದ್ಯರಾಗಿದ್ದಿರಲ್ಲವೆ?' ಎಂದು ಕೇಳಿದನು.

'ಹೌದು, ನಿಮಗೇನಾದರೂ ಕಾಯಿಲೆಯಾಗಿದೆಯೆ?' ಎಂದು ಕೇಳಿದನು ಪಶುವೈದ್ಯ.

ಕೆಲವರಿಗೆ ಸೇವೆ ಮಾಡುವ ಹುಮ್ಮಸ್ಸು, ತಮ್ಮ ಒಳಿತನ್ನು ಕಡೆಗಣಿಸಿ ಇತರರ ಒಳಿತನ್ನು ಸಾಧಿಸುವ ಉತ್ಸಾಹ. ಇಲ್ಲಿ ಇತರರ ಮೇಲೆ ಕಳಕಳಿಗಿಂತ ತಮ್ಮ ಚಪಲವನ್ನು ತೀರಿಸುವ ಹಂಬಲವೇ ಅಧಿಕವಾಗಿರುತ್ತದೆ. ಇಂತಹ ಸೇವೆಯಿಂದ ಅನೇಕ ವೇಳೆ ಸೇವೆ ಮಾಡಿಸಿಕೊಂಡವರಿಗೆ ಹೆಚ್ಚು ಅನಾನುಕೂಲವೇ ಆಗುತ್ತದೆ.

ಒಂದು ಮಂಗ ಇತ್ತು. ಅದು ಒಂದು ನದಿಯ ದಡದಲ್ಲಿ ಕುಳಿತುಕೊಂಡಿತ್ತು. ನೀರಿನಲ್ಲಿ ಕಂಡ ಮೀನುಗಳ ದೃಶ್ಯ ಅದರಲ್ಲಿ ಸೇವಾ ಮನೋಭಾವವನ್ನು ಕೆರಳಿಸಿತು. ಅದು ಒಂದೊಂದೇ ಮೀನನ್ನು ತೆಗೆದು ಮರದಮೇಲೆ ಬಿಡತೊಡಗಿತು.

ಯಾರೋ ಮಂಗನನ್ನು ಕೇಳಿದರು, 'ಏನು ಮಾಡುತ್ತಿರುವೆ?' ಎಂದು.

'ಸೇವೆ ಮಾಡುತ್ತಿರುವೆ.'

'ಇದೆಂತಹ ಸೇವೆಯೊ, ಮಂಗ!'

'ಪಾಪ, ಈ ಮೀನುಗಳು ನೀರಿನಲ್ಲಿ ಮುಳುಗಿ ಪರದಾಡುತ್ತಿವೆ. ಅವುಗಳನ್ನು ನೀರಿನಿಂದ ರಕ್ಷಿಸಿ ಮರದ ಮೇಲೆ ಬಿಡುತ್ತಿದ್ದೇನೆ.'

'ಒಬ್ಬನ ಅಮೃತ ಇನ್ನೋರ್ವನ ವಿಷವಾಗಬಲ್ಲದು.'